ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2486
2) ಸದಸ್ಯರ ಹೆಸರು : ಶ್ರೀ ಗಣಪತಿ ದುಮ್ಮಾ ಉಳ್ವೇಕರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 23-03-2022
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ	ತೌಕೆ ಚಂಡಮಾರುತದ ವೇಳೆಯಲ್ಲಿ ಮೀನುಗಾರರ ಎಷ್ಟು ಬೋಟುಗಳು ಹಾನಿಗೊಳಗಾಗಿವೆ; ಈ ನಿಟ್ಟಿನಲ್ಲಿ ಮೀನುಗಾರರಿಗೆ ಯಾವರೀತಿ ಪರಿಹಾರ ವಿತರಿಸಲಾಗಿದೆ; (ಕರಾವಳಿ ಜಿಲ್ಲಾವಾರು ಮಾಹಿತಿಯನ್ನು ನೀಡುವುದು)	<u>**ಉಡುಪಿ ಜಿಲ್ಲೆ:**</u> ತೌಕೆ ಚಂಡಮಾರುತದ ವೇಳೆಯಲ್ಲಿ ಉಡುಪಿ ತಾಲೂಕಿನಲ್ಲಿ 01 ದೋಣಿ ಮಾತ್ರ ಹಾನಿಯಾಗಿದ್ದು, ನಷ್ಟದ ಮೊತ್ತ 1.00 ಲಕ್ಷ ಆಗಿರುತ್ತದೆ. ಅದಕ್ಕೆ ಮೀನುಗಾರಿಕೆ ಇಲಾಖೆಯಿಂದ ಪರಿಹಾರ ನೀಡಲಾಗಿದೆ. ಕುಂದಾಪುರ ತಾಲೂಕಿನಲ್ಲಿ 33 ದೋಣಿಗಳು ಹಾನಿಯಾಗಿದ್ದು, ಸಂತ್ರಸ್ತರು ಮೀನುಗಾರಿಕೆ ಇಲಾಖೆಗೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುವುದಿಲ್ಲ. <u>**ಕಾರವಾರ ಜಿಲ್ಲೆ:**</u> ತೌಕೆ ಚಂಡಮಾರುತದಲ್ಲಿ ಉತ್ತರ ಕನ್ನಡ ಜಿಲ್ಲೆಯ 72 ದೋಣಿಗಳು ಪೂರ್ಣ ಹಾಗೂ 64 ದೋಣಿಗಳು ಭಾಗಶಃ ಹೀಗೆ ಒಟ್ಟು 136 ದೋಣಿಗೆ ಒಟ್ಟು ರೂ.10.69 ಲಕ್ಷಗಳನ್ನು **ಕಂದಾಯ ಇಲಾಖೆಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ನೀಡಲಾಗಿದೆ.** <u>**ದಕ್ಷಿಣ ಕನ್ನಡ ಜಿಲ್ಲೆ:**</u> ತೌಕೆ ಚಂಡಮಾರುತದ ವೇಳೆಯಲ್ಲಿ ಮೀನುಗಾರರ ಬೋಟುಗಳು ಹಾನಿಯಾಗಿರುವುದಿಲ್ಲ. ಆದುದರಿಂದ ಮೀನುಗಾರಿಕೆ ಇಲಾಖೆಯಿಂದ ಪರಿಹಾರ ನೀಡಿರುವುದಿಲ್ಲ.
ಆ	ಈ ತೌಕೆ ಚಂಡಮಾರುತದ ಸಮಯದಲ್ಲಿ ಬೋಟುಗಳು ಮುಳುಗಿ ಮೃತರಾದ ಮೀನುಗಾರರ ಎಷ್ಟು ಕುಟುಂಬಗಳಿಗೆ ಎಷ್ಟು ಪರಿಹಾರ ಮೊತ್ತ ವಿತರಿಸಲಾಗಿದೆ; (ಹೆಸರಿನೊಂದಿಗೆ ಮಾಹಿತಿ ನೀಡುವುದು)	ತೌಕೆ ಚಂಡಮಾರುತದ ಸಮಯದಲ್ಲಿ ಯಾವುದೇ ಬೋಟುಗಳು ಮುಳುಗಡೆಯಾಗಿರುವುದಿಲ್ಲ.
ಇ	ಮೃತ ಮೀನುಗಾರರ ಅವಲಂಬಿತರಿಗೆ ಮತ್ತು ಅವರ ಮಕ್ಕಳ ವಿದ್ಯಾಭ್ಯಾಸದ ಸಂಪೂರ್ಣ ವೆಚ್ಚವನ್ನು ಸರ್ಕಾರ ಭರಿಸುವುದೆ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;	ಅನ್ವಯಿಸುವುದಿಲ್ಲ.

ಈ ರೀತಿಯ ನೈಸರ್ಗಿಕ ಪ್ರಕೋಪಗಳಿಂದ ಮೃತ ಹೊಂದುವ ಮೀನುಗಾರರ ಕುಟುಂಬ ಸಬಲೀಕರಣ ಮತ್ತು ಜೀವನೋಪಾಯ ಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?	ಮೀನುಗಾರಿಕೆಯಲ್ಲಿ ತೊಡಗಿರುವಾಗ ಮೃತ ಹೊಂದುವ ಮೀನುಗಾರರ ಕುಟುಂಬ ಸಬಲೀಕರಣ ಮತ್ತು ಜೀವನೋಪಾಯ ಕ್ಕಾಗಿ ನೀರಿನಲ್ಲಿ ಮುಳುಗಿ ಮರಣ ಹೊಂದಿದ ಪ್ರಕರಣಗಳಿಗೆ ಸಂಕಷ್ಟ ಪರಿಹಾರ ನಿಧಿಯೋಜನೆಯಡಿ ರೂ.6.00 ಲಕ್ಷ ಪರಿಹಾರ ನೀಡಲಾಗುವುದು. ಮೀನುಗಾರಿಕೆಯಲ್ಲಿ ತೊಡಗಿರುವಾಗ ಹೊರತುಪಡಿಸಿ ಧಕ್ಕೆಯಲ್ಲಿ/ಬಂದರಿನ ಒಳಗೆ/ಅಧಿಕೃತ ಇಳಿದಾಣ ಕೇಂದ್ರಗಳಲ್ಲಿ/ನದಿ ದಡದಲ್ಲಿ ಮರಣ ಹೊಂದಿದ ಪ್ರಕರಣಗಳಿಗೆ ಹಾಗೂ ಮೀನುಗಾರಿಕೆಯಲ್ಲಿ ತೊಡಗಿದಾಗ ಅನಾರೋಗ್ಯದಿಂದ ಮೃತಪಟ್ಟ ಪ್ರಕರಣಗಳಿಗೆ ರೂ.3.00 ಲಕ್ಷ ಪರಿಹಾರ ನೀಡಲಾಗುವುದು. ಮೃತರು ಅವಿವಾಹಿತರಾಗಿದ್ದಲ್ಲಿ, ಪರಿಹಾರ ಮೊತ್ತವನ್ನು ಪೋಷಕರಿಗೆ ಹಾಗೂ ಮೃತರು ವಿವಾಹಿತರಾಗಿದ್ದಲ್ಲಿ, ಪರಿಹಾರ ಮೊತ್ತವನ್ನು ಮೃತರ ಪತ್ನಿಗೆ ಶೇ.50 ರಷ್ಟು ಹಾಗೂ ಮೃತರ ಮಕ್ಕಳು ಹಾಗೂ ಪೋಷಕರಿಗೆ ಬಾಕಿ ಶೇ.50 ರಷ್ಟು ಸಮಾನವಾಗಿ ನೀಡಲಾಗುವುದು. ಮೃತರ ಮಕ್ಕಳು ಅಪ್ರಾಪ್ತರಾಗಿದ್ದಲ್ಲಿ, ಪರಿಹಾರ ಮೊತ್ತವನ್ನು ಮೃತರ ಪತ್ನಿಗೆ ನೀಡಲಾಗುವುದು. ಪ್ರಾಕೃತಿಕ ವಿಕೋಪದಿಂದಾದ ನಾಡದೋಣಿ / ಮೋಟರೀಕೃತ ದೋಣಿಗಳ ಹಾನಿಗೆ ಹಾಗೂ ಬಲೆ ಇನ್ನಿತರ ಸ್ವತ್ತು ಹಾನಿಗೆ ಸವಕಳಿ ಕಳೆದು ಗರಿಷ್ಟ ರೂ.1.00 ಲಕ್ಷ ಅಥವಾ ಖರೀದಿ ಮೌಲ್ಯದ/ ದುರಸ್ತಿಯ ಶೇ.50ರಷ್ಟು ಮೌಲ್ಯವನ್ನು ಪರಿಹಾರವಾಗಿ ನೀಡಲಾಗುವುದು. ಮೀನುಗಾರಿಕೆಯಲ್ಲಿ ಅಥವಾ ಮೀನುಗಾರಿಕೆ ಚಟುವಟಿಕೆ ಯಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ವೈದ್ಯಕೀಯ ಶುಶ್ರೂಷೆಗಾಗಿ ಮಾಡಿದ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ ರೂ.1.00 ಲಕ್ಷಗಳ ಮಿತಿಗೊಳಪಟ್ಟು ಪರಿಹಾರ ನೀಡಲಾಗುವುದು. ಮುಂದುವರೆದು, ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯ ಉಪ ಯೋಜನೆಯಾದ ಜನತಾ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿ ಮೃತ ಮೀನುಗಾರರಿಗೆ ಹೆಚ್ಚುವರಿ ಯಾಗಿ ರೂ.5.00 ಲಕ್ಷ ಪರಿಹಾರ ಲಭ್ಯವಾಗುವುದು. ಹಾಗೂ ಶಾಶ್ವತ ಅಂಗವಿಕಲರಾದವರಿಗೆ ರೂ.2.50 ಲಕ್ಷಗಳ ಪರಿಹಾರ ಲಭ್ಯವಾಗುವುದು.

ಸಂಖ್ಯೆ: ಪಸಂಮೀ ಇ-101 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು